**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಕಡೂರು.</u>**

**<u>ಸಿಸಿ. ಸಂಖ್ಯೆಃ 2867/2024</u>**

ಪಿರ್ಯಾದಿಃ ಶ್ರೀ ಆಲ್ಬರ್ಟ್ ಡಿಸೋಜಾ ಬಿನ್ ಮ್ಯಾನುಯಲ್ ಡಿಸೋಜ, ಸುಮಾರು 60 ವರ್ಷ, ವಾಸ : ಲಕ್ಷ್ಮೀಶ ನಗರ, ಕಡೂರು ಟೌನ್, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

ಆರೋಪಿಃ ಶ್ರೀ ವಿ.ರಾಜಪ್ಪ ಬಿನ್ ವೀರಪ್ಪ, ಸುಮಾರು 51 ವರ್ಷ, ವವಸಾಯ, ವಾಸ : ನಂದೀಪುರ ಗ್ರಾಮ, ಶಿವನಿ ಹೋಬಳಿ, ಅಜ್ಜಂಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**<u>ಃಆಪಾದನೆಃ</u>**

ಆರೋಪಿಯಾದ ನೀವು ಪಿರ್ಯಾದುದಾರರಿಂದ ರೂ.8,00,000/- ಸಾಲವನ್ನು ದಿನಾಂಕಃ25.10.2023 ರಂದು ಕೌಟುಂಬಿಕ ಅಗತ್ಯತೆಗಾಗಿ ಏಳು ತಿಂಗಳ ಒಳಗಾಗಿ ತೀರಿಸುವುದಾಗಿ ಪಡೆದಿದ್ದು, ಅದನ್ನು ಮರುಪಾವತಿಸಲು ಆಗದೆ, ಸದರಿ ಭಾದ್ಯತೆಯ ಮರುಪಾವತಿಗಾಗಿ ಪಿರ್ಯಾದುದಾರ ಬ್ಯಾಂಕಿನ ಹೆಸರಿಗೆ ರೂ.8,00,000/- ಕರ್ನಾಟಕ ಬ್ಯಾಂಕ್, ಅಜ್ಜಂಪುರ ಶಾಖೆ, ಚೆಕ್ ನಂಃ 790266 ರ ಚೆಕ್ಕನಲ್ಲಿ ದಿನಾಂಕ : 19.06.2024 ಎಂದು ನಮೂದು ಮಾಡಿ ಪಿರ್ಯಾದುದಾರರ ಬ್ಯಾಂಕಿಗೆ ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾದುದಾರರು ತನ್ನ ಶಾಖೆ ಇರುವ ಕೊಟಕ್ ಮಹೀಂದ್ರ ಬ್ಯಾಂಕ್, ಕಡೂರು ಬ್ಯಾಂಚ್ ನಲ್ಲಿ ದಿನಾಂಕ 22.06.2022 ರಂದು ನಗದೀಕರಿಸಲು ಹಾಜರುಪಡಿಸಿದಾಗ, ಬ್ಯಾಂಕಿನವರು "Funds Insufficient" ಎಂಬ ಹಿಂಬರಹದೊಂದಿಗೆ ಚೆಕ್ಕು ಅಮಾನ್ಯಗೊಂಡಿದ್ದು, ಆ ಬಗ್ಗೆ ಸದರಿ ಬ್ಯಾಂಕಿನವರು ಹಿಂಬರಹ ನೀಡಿದ್ದು, ನಂತರ ಫಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿನಾಂಕಃ 05.07.2024 ರಂದು ತಿಳುವಳಿಕೆ ಪತ್ರವನ್ನು ಕಳುಹಿಸಿದ್ದರೂ ಸಹ ಹಣ ಮರುಪಾವತಿ ಮಾಡಿರುವುದಿಲ್ಲ, ಆ ಕಾರಣ ನೀವು ವರ್ಗಾವಣೆಯ ಲಿಖಿತ ಅಧಿನಿಯಮ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿದ್ದೀರೆಂದು ಆಪಾದಿಸಲಾಗಿದೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಆರೋಪಿ ಉತ್ತರ ಃ ತಿಳಿಯಿತು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಆರೋಪಿ ಉತ್ತರ ಃ ತಪ್ಪು ಮಾಡಿರುವುದಿಲ್ಲ. ವಿಚಾರಣೆ ಆಗಬೇಕು

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕಃ 20 ನೇ ನವಂಬರ್, 2024.

-ಸಹಿ-

(ಅಫ್ರಿನ್ ಸುಲ್ತಾನ)
ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಡೂರು.